ಅನುಕೂಲತೆಗಳನ್ನು ಈ ಬಜೆಟ್‌ನಲ್ಲಿ ಇಟ್ಟಿದ್ದೀರಿ ? ಮಹಿಳೆಯರ ಬಗ್ಗೆ ಈ ಬಜೆಟ್‌ನಲ್ಲಿ ಏನು ಇಟ್ಟಿದ್ದೀರಿ ? ಸ್ಟೈಫೆಂಡರಿಯಲ್ಲಿ ಕೆಲಸ ಮಾಡುತ್ತಿರುವ ಯುವಕರಿಗೆ ೫೦ ರೂಪಾಯಿಗಳನ್ನು ಜಾಸ್ತಿ ಮಾಡಿರುವುದನ್ನು ಬಿಟ್ಟರೆ ಬೇರೆ ಏನೂ ಯುವಕರಿಗಾಗಿ ನೀವು ಮಾಡಿಲ್ಲ. ಇನ್ನು ಕೊನೆಯದಾಗಿ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಶೆಡ್ಯೂಲ್ ಟ್ರೈಬ್ ಕಾರ್ಪೊರೇಷನ್, ಹಾಗೂ ಮೈನಾರಿಟೀಸ್ ಕಾರ್ಪೊರೇಷನ್‌ಗಳ ಗತಿ ಇವತ್ತು ಏನಾಗಿದೆ. ಈ ಕಾರ್ಪೊರೇಷನ್‌ಗಳ ಬಗ್ಗೆ ಒಂದು ಮಾತು ಆಡಿದ್ದೀರಾ ? ಶೆಡ್ಯೂಲ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಜನಾಂಗದವರಿಗೆ ಈ ಬಜೆಟ್‌ನಲ್ಲಿ ಏನಾದರು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದೀರಾ ? ಸಮಾಜದಲ್ಲಿರುವ ಇತರ ದುರ್ಬಲ ವರ್ಗದ ಜನರಿಗಾಗಿ ಹಣ ಇಟ್ಟಿದ್ದೀರಾ ? ಸಂಪೂರ್ಣವಾಗಿ ದಿವಾಳಿ ಎದ್ದೋಗಿರುವ ನಿಮ್ಮ ಸರ್ಕಾರ ದುರ್ಬಲವರ್ಗದವರಿಗೆ ಹಣ ಇಡುವುದಕ್ಕೆ ಆಗುತ್ತದೆಯೇ ? ಅಲ್ಪ ಸಂಖ್ಯಾತರುಗಳ ಬಗ್ಗೆ ಹಿಂದುಳಿದ ವರ್ಗಗಳವರ ಬಗ್ಗೆ ಯಾವ ಮಾತನ್ನೂ ಈ ಬಜೆಟ್‌ನಲ್ಲಿ ಹೇಳಿಲ್ಲ. ಕರ್ನಾಟಕ ರಾಜ್ಯದಲ್ಲಿ ನಿಮ್ಮ ಆಡಳಿತದಿಂದ ಸಂಪೂರ್ಣವಾಗಿ ಆರ್ಥಿಕ ವಿಫಲತೆ ಉಂಟಾಗಿದೆ. ಕರ್ನಾಟಕ ಸರ್ಕಾರವನ್ನು ಸಂಪೂರ್ಣವಾಗಿ ದಿವಾಳಿ ಮಾಡಿದ್ದೀರಿ. ನಮ್ಮ ರಾಜ್ಯದ ಟ್ರಜರಿಯು ರಾಜ್ಯದ ೨೦ ಜಿಲ್ಲೆಗೂ ಹಣವನ್ನು ಸಪ್ಲೈ ಮಾಡಬೇಕಾಗಿದೆ. ನಾವು ಆಡಳಿತಕ್ಕೆ ಬಂದರೆ ಎಲ್ಲವನ್ನೂ ಚೊಕ್ಕ ಮಾಡುತ್ತೇವೆಂದು ಹೇಳಿ ಆಡಳಿತಕ್ಕೆ ನೀವು ಬಂದಿರಿ. ನಿಜವಾಗಿ ನೀವು ಚೊಕ್ಕ ಮಾಡಿದ್ದೀರಿ. ಖಜಾನೆಯಲ್ಲಿರುವ ಪೂರ್ತಿ ಹಣವನ್ನೆಲ್ಲಾ ಕಸ ಗುಡಿಸಿ ತೆಗೆದು ಚೆನ್ನಾಗಿ ಚೊಕ್ಕ ಮಾಡಿದ್ದೀರಿ. ಈಗ ಆರ್ಥಿಕವಾಗಿ ಕಷ್ಟದಲ್ಲಿದ್ದೇವೆ ಎನ್ನಕತ್ತ ಮಾತನ್ನು ಆಡಿ ರಾಮಕೃಷ್ಣ ಹೆಗಡೆಯವರು ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಆಕಾಶಕ್ಕೆ ಮುಖ ಮಾಡಿ ನಿಂತಿರತಕ್ಕ ನಿಮ್ಮ ಪರಿಸ್ಥಿತಿಯನ್ನು ನೋಡಿದರೆ ನಿಜವಾಗಿ ನನಗೆ ದುಃಖವಾಗುವುದಿಲ್ಲ. ಏಕೆಂದರೆ ಜನತೆಯು ನಿಮಗೆ ಓಟು ಕೊಟ್ಟು ಮೋಸ ಹೋಗಿದ್ದಾರೆ ಅದಕ್ಕೆ ನೀವು ಸರಿಯಾಗಿ ಶಿಕ್ಷೆಯನ್ನು ಅನುಭವಿಸುತ್ತಿದ್ದೀರಿ. ಮಾನ್ಯ ದೇವೇಗೌಡರೇ ನೀವು ಅಕ್ಷಮ್ಯ ಅಪರಾಧವನ್ನು ಜನತೆಗೆ ಮಾಡಿದ್ದೀರಿ. ಅದಕ್ಕೆ ಜನತೆಯು ನಿಮ್ಮ ಬಳಿ ತಪ್ಪು ದಂಡ ವಸೂಲಿ ಮಾಡದೇ ಬಿಡುವುದಿಲ್ಲವೆಂಬ ಎಚ್ಚರಿಕೆಯನ್ನು ರೂಪದಲ್ಲಿ ಈ ಮಾತನ್ನು ಹೇಳಿ, ಇನ್ನು ಮುಂದಾದರೂ ನಿಮಗೆ ಜ್ಞಾನೋದಯವಾಗಿ ರಾಜ್ಯಕ್ಕೆ ಹಿತವಾಗಲೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಒಂದು ಪ್ರಕಟಣೆ ಇದೆ.

ANNOUNCEMENT

MR. CHAIRMAN.—I would like to make the following announcement.

1. Hon. members are hereby informed that the following persons who threw leaflets and sheuted slogans in the gallery today are guilty of having committed the contempt of the House.

Sriyuths·—

(1) K. S. Basavaraju
(2) Panchakshari
(3) G. Shivakumar
(4) N. S, Sidaramaiah
(5) S. Nagakumar

The passes were issued to them on the recommendotion of the office of Deputy Chairman, Legislative Council.

2. Any misconduct or infringement of the rules regulating admission of visitors to gallary has to be treated as grave offence and contempt of the House punishable with imprisonment.

As hon. members are responsible for any untoward or undesirable incidents in the public Gallery by the holders of passes issued at their request, the Hon. members should fully satisfy themselves about the persons for whom such passes are recommended by them.

3. The concerned persons were taken into custody by the Watch and Ward staff on 24-3-1988.

All the above named persons have been ordered to be detained in custody till the adjournment of the House for the day and thereafter be released with a strict warning.

ಅಧ್ಯಕ್ಷರು.—ಈಗ ಸಭೆಯು ಮುಂಕ್ಕಾಯವಾಯಿತು. ಪುನಃ ನಾಳೆ ಬೆಳಿಗ್ಗೆ ೯ ಗಂಟೆಗೆ ಸಭೆಯು ಸೇರುತ್ತದೆ.

(ಸದನವು ೬ ಗಂಟೆ ೩೫ ನಿಮಿಷದಲ್ಲಿ ಮುಂಕ್ಕಾಯವಾಗಿ ಪುನಃ ತಾ. ೨೫-೩-೧೯೮೮ ರಂದು ಬೆಳಿಗ್ಗೆ ೯-೦೦ ಗಂಟೆಗೆ ಸೇರಲು ನಿಶ್ಚಯಿಸಿತು.)